ಊಟದ ಡಬ್ಬಿ ತರದ ಅವರ ಹೊಟ್ಟೆಗೆ ಬಿಸಿಬಿಸಿ ಸಾಂಬಾರನ್ನ ಉಣಿಸಿದ್ದು ಇದೇ ಮೇಜಿನ ಮೇಲೆ. ಆ ದಿನ ಮರೆಯಲು ಸಾಧ್ಯವೇ? ಕನ್ನಡದ ವರನಟ ತಮ್ಮ ಚಿತ್ರೀಕರಣವನ್ನು ಮುಂದೂಡಿಕೊಂಡು ದೋಸೆ ತಿನ್ನುವ ಆಸೆಯಿಂದ ಬಂದಿದ್ದರು. ನಮ್ಮ ಯಜಮಾನರಿಗೆ ನಂಬಲು ಸಾಧ್ಯವೇ ಆಗಲಿಲ್ಲ. ತಾವೇ ಸ್ವತಃ ಎದ್ದು ವರನಟರ ಕೈಹಿಡಿದು ಇದೇ ಮೇಜು- ಕುರ್ಚಿಯಲ್ಲಿ ಕುಳ್ಳಿರಿಸಲಿಲ್ಲವೇ? ಅವರದು ಅದೆಂತಹ ಪ್ರೀತಿ ನಮ್ಮ ಮಾಣಿಯ ಕೈಯ್ಯಲ್ಲಿ ನೋಟು ತುರುಕಿ 'ಚೆನ್ನಾಗಿರು ಮಗು' ಎಂದು ಹರಸಿರಲಿಲ್ಲವೇ? ಯಜಮಾನರು ಒಂದು ಫೋಟೋ ತೆಗೆದುಕೊಂಡು ಗೋಡೆಗೇರಿಸಿದರು. ಅದರಲ್ಲಿ ಅವರ ಎದೆಗೆ ಒರಗಿಕೊಂಡಿದ್ದ ಮೇಜು ಜಂಭವಾಗಿ ನೋಡಿದಂತಿತ್ತು. ಯಾರೋ ಬಹಳ ದೊಡ್ಡ ಚಲನಚಿತ್ರ ನಿರ್ದೇಶಕರಂತೆ ತಮ್ಮ ಸ್ಕ್ರಿಪ್ಟ್ ಇಟ್ಟುಕೊಂಡು ನಿರ್ಮಾಪಕರೊಂದಿಗೆ ಚರ್ಚೆ ಮಾಡುತ್ತಿದ್ದರು. ತಿಂಡಿ ಬೇಡ ಎಂದರು. ಆದರೆ ಕಾಫಿಯನ್ನು ಮಾತ್ರ ಒಂದೈದಾರು ಲೋಟಾ ಕುಡಿದರು. ಸುಮಾರು ಹೊತ್ತು ಚರ್ಚೆಯ ನಂತರ ಎಲ್ಲಾ ಇತ್ಯರ್ಥವಾಗಿತ್ತೆಂದು ಕಾಣುತ್ತದೆ. ತಾವು ಕುಡಿದ ಕಾಫಿಗೆ ಮೂರುಪಟ್ಟು ದುಡ್ಡು ಕೊಟ್ಟು ಹೋದದ್ದು ಮರೆಯಲು ಸಾಧ್ಯವೇ? ಇದು ಬಹಳ ಅದೃಷ್ಟದ ಮೇಜು. ನಮ್ಮ ಸಿನಿಮಾ ಸೂಪರ್ ಹಿಟ್ ಆಯಿತು ಎಂದು ಮತ್ತೊಮ್ಮೆ ಬಂದು ಅದೇ ಮೇಜಿನ ಮೇಲೆ ಖಾಲಿ ದೋಸೆ ತರಿಸಿಕೊಂಡು ತಿಂದು ಕಾಫಿ ಕುಡಿದು ಹೋಗಿದ್ದರು.

ಅಬ್ಬಾ ಒಂದೇ ಒಂದು ಸಲ ಬಂದಿದ್ದಳು ಆ ಹೆಣ್ಣುಮಗಳು. ಎಂತಹ ಸುಂದರಿ. ರಂಭೆ, ಊರ್ವಶಿಯರೂ ಅವಳ ಮುಂದೆ ಸೊನ್ನೆ. ಬಾದಾಮಿ ಹಾಲು ಕುಡಿದು ತನ್ನ ಗಂಡ ಬರುವವರೆಗೂ ಕಾಯುತ್ತಾ ಕುಳಿತಿದ್ದಳು. ಗಂಡ ಬಂದು ಹೋಗೋಣವೇ ಎಂದರೆ, 'ಇಲ್ಲಿ ಬನ್ನಿ ಬಾದಾಮಿ ಹಾಲು ತುಂಬಾ ಚೆನ್ನಾಗಿದೆ, ತೆಗೆದುಕೊಳ್ಳಿ ಎಂದು ಬಲವಂತ ಮಾಡಿದಳು. ಅವಳ ಪ್ರೀತಿಯ ಒತ್ತಾಯಕ್ಕೆ ಮಣಿದ ಆತ ಅವಳಿಗೂ ತನಗೂ ಮತ್ತೆರೆಡು ಲೋಟ ಬಾದಾಮಿ ಹಾಲು ತರಿಸಿದ. ಒಂದು ಆರು ತಿಂಗಳು ಕಳೆದಿರಬಹುದು ಅವನು ಒಬ್ಬನೇ ಮತ್ತೆ ಬಂದ. ಅದೇ ಮೇಜಿನ ಮುಂದೆ ಕುಳಿತ. ಮೊದಲಿನಂತೆ ಅವನು ನಗುತ್ತಾ ಇರಲಿಲ್ಲ. ಕುರುಚಲು ಗಡ್ಡ ಬೆಳೆದಿತ್ತು. ಎರಡು ಲೋಟ ಬಾದಾಮಿ ಹಾಲು ತರಿಸಿದ. ಒಂದನ್ನು ತಾನು ಕುಡಿದು, ಮೊತ್ತೊಂದನ್ನು ನೋಡುತ್ತಾ ಕಣ್ಣೀರು ಹಾಕುತ್ತಿದ್ದ. ಅರೆ ಇವನಿಗೇನಾಯಿತು. ಮೇಜಿನ ಮೇಲೆ ಇವನ ಕಣ್ಣೀರು ಬಿದ್ದಾಗ ಬೆಂಕಿಯ ಉಂಡೆ ಬಿದ್ದಂತಹ ಅನುಭವ ಮೇಜಿಗೆ. ಅವನ ಕೈಯ್ಯಲ್ಲೊಂದು ದಿನಪತ್ರಿಕೆ ಇತ್ತು. ಅದರಲ್ಲಿ ಆ ಸುಂದರಿಯ ಚಿತ್ರ ಅಚ್ಚಾಗಿತ್ತು. ಕೆಳಗೆ ದೈವಾಧೀನರಾದರು ಎಂದು ಬರೆದಿತ್ತು. ಅಯ್ಯೋ ದುರ್ದೈವವೇ? ಇಷ್ಟು ಬೇಗ ಈಕೆ ಸಾವಿನ ಮನೆಯ ಕದ ತಟ್ಟಿದಳೇ? ಅವನು ಎದ್ದು ಹೊರಡುವವನಿದ್ದ. ನಮ್ಮ ಮಾಣಿ, 'ಸಾರ್ ಸಾರ್... ಹಾಲು ಕುಡಿದೇ ಇಲ್ಲಾ...' ಎಂದು ಆಶ್ಚರ್ಯ ವ್ಯಕ್ತಪಡಿಸಿದ. ಅದಕ್ಕೆ ಮೌನವೇ ಅವನ ಉತ್ತರ. ಮತ್ತೆಂದೂ ಬರಲಿಲ್ಲ ಅವನು. ಅದೇ ವೇಳೆಗೆ ಅಲ್ಲಿಗೆ ಅಪ್ಪ- ಮಗಳು ಬಂದರು. ಎಷ್ಟು ರಮಿಸಿದರು. ಮಗಳು ತಿಂಡಿ ತಿನ್ನಲು ಒಪ್ಪಲಿಲ್ಲ. ಇನ್ನೂ ಚಿಕ್ಕವಳು, ಹೈಸ್ಕೂಲು ಇರಬಹುದೇನೋ? 'ಅಪ್ಪಾ ನನಗೆ ಹೋಟೆಲ್ ತಿಂಡಿ ತಿಂದು ಬೇಜಾರಾಗಿದೆ. ನನಗೆ ಏನೂ ಬೇಡ. ನಾನು ಮನೆಯಲ್ಲಿ ಮ್ಯಾಗಿ ಮಾಡಿಕೊಳ್ಳುತ್ತೇನೆ'. ಅವಳ ತಂದೆ 'ಪುಟ್ಟಾ, ನೀನು ಈ ಹೋಟೆಲಿನ ತಿಂಡಿ ತಿಂದಿಲ್ಲ. ಇದನ್ನು ತಿನ್ನು ದಿನಾ ಇದೇ ಬೇಕೆನ್ನುತ್ತೀಯ. ಎಷ್ಟು ರುಚಿಯಿದೆ ಗೊತ್ತಾ? ನಿಮ್ಮಮ್ಮ ಇದ್ದಾಗ ಬಲವಂತವಾಗಿ ಇಲ್ಲಿಗೇ ಕರೆದು ತರುತ್ತಿದ್ದಳು. ಈ ದಿನ ತಿನ್ನು, ನಾಳೆಯಿಂದ ಕಷ್ಟವೋ, ಸುಖವೋ ನಾನೇ ಬೇಯಿಸಿ ಹಾಕುತ್ತೇನೆ. ಅಪ್ಪನಿಗೆ ಬೇಜಾರು ಮಾಡಬಾರದಲ್ಲಾವಾ?' ಅದೆಷ್ಟು ಪ್ರೀತಿಯಿಂದ ಅವಳನ್ನು ಸಂತೈಸುತ್ತಿದ್ದರು. ಪಾಪ ತಾಯಿ ಇಲ್ಲದ ಹುಡುಗಿ. ಆರೈಕೆ ಇಲ್ಲದೆ ಸೊರಗಿದ್ದಾಳೆ. ತಕ್ಷಣ ಮೇಜಿಗೆ ನೆನಪಿಗೆ ಬಂತು. ಇವಳ ಅಮ್ಮ ಇದ್ದಾಗ ಗಂಡ- ಹೆಂಡತಿ ಮಗುವನ್ನು ನಡೆಸಿಕೊಂಡು ಅದರ ತೊದಲು ಮಾತು ಕೇಳಿ ನಗುತ್ತಾ ತಿಂಡಿ ತಿನ್ನುತ್ತಿದ್ದರು. ಆ ಮಗುವಿಗೆ ಐದಾರು ವರ್ಷವಿರಬೇಕು. ಅಮ್ಮ ಕಥೆ ಹೇಳುತ್ತಿದ್ದಳು. 'ಪುಟ್ಟಿ, ಹೆಣ್ಣುಮಕ್ಕಳು

